Reg no KRMN 12 - -- ಶ್ರೀ - - For Influential Publicity - 12-10-76

ಕೃಷ್ಣ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ದಿವ್ಯ

ಸತ್ಯವಾದಿ

SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸ್ಥಾಪಕರು : ಆರಮನೆ ನಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಅಧಿಕೃತ ಪ್ರಕಟಣೆ

ನವ ದೆಹಲಿ — ದೇಶದಲ್ಲಿ ಸೆಪ್ಟೆಂಬರು ತಿಂಗಳಿನಲ್ಲಿ ಸರ್ವ ಕಾಲದ ದಾಖಲೆ 1.3 ಮಿಲಿಯ ಸಂತಾನ ಹರಣ ಚಿಕಿತ್ಸೆಗಳು ನಡೆದಿರುವುದಾಗಿ ಅಧಿಕೃತ ಪ್ರಕಟಣೆ ತಿಳಿಸುತ್ತದೆ.

★

ಐಕ್ಯತೆಗೆ ಕರೆ

ಪೋರ್ಟ್‌ಲೂಯಿ — ಆಫ್ರಿಕಾದ ಸ್ವಾತಂತ್ರ್ಯಕ್ಕೆ ಆಫ್ರಿಕಾ ದೇಶಗಳು ಮಾತ್ರವಲ್ಲದೆ ಸಂಪೂರ್ಣ ಅಲಿಪ್ತ ರಾಷ್ಟ್ರಗಳ ಐಕ್ಯತೆಗೆ ಭಾರತ ಹಾಗೂ ಮಾರಿಷಸ್ ಕರೆ ಕೊಟ್ಟಿವೆ

○

ಪ್ರಧಾನರ ನುತಿ

ಪೋರ್ಟ್‌ಲೂಯಿ — ಮಾರಿಷಸ್‌ನ ವಿಶ್ವವಿದ್ಯಾನಿಲಯು ಇತ್ತ ಗೌರವಾನ್ವಿತ ಪದವಿಯನ್ನು ಪಡೆದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಭಾರತದ ವಿಜ್ಞಾನ ಹಾಗೂ ತಾಂತ್ರಿಕ ಅನುಭವಗಳನ್ನು ಏಷ್ಯ ಮತ್ತು ಆಫ್ರಿಕಾದ ಇತರ ದೇಶಗಳಿಗೆ ಹಂಚಿಕೊಡುವುದಾಗಿ ತಿಳಿಸಿದರು

●

ಮಿಂಚಿನಿಂದ ಮರಣ

ಚಂಗಲ್ಪೆಟ್ — ಪೆಲವಾಕ ಗ್ರಾಮದಲ್ಲಿ 8 ಮಂದಿ ಮಿಂಚಿನ ಹೊಡೆತದಿಂದ ಪತ್ತರು.

100 ವರ್ಷದ ಪತ್ರಿಕೆ

ಕೊಚ್ಚಿ — ಕೇರಳ ಟೈಮ್ಸ್‌ನ ಭಾನ್ಸು ವಾರದ ಪತ್ರಿಕೆ ಪತ್ರಾನಂದಂಗೆ 100 ವರ್ಷ ತುಂಬಿತು.

ಆಶ್ಚರ್ಯ ವಿಷಯ

ಸಹಾರಾ ಅರೇಬಿಯಾ ಮರಳುಕಾಡಿನ ಕೆಳಗೆ ಭಾರಿ ಜಲಾಶಯವಿರುವುದಾಗಿ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಉದ್ಯೋಗಗಳ ನಿರೀಕ್ಷೆ

ನವ ದೆಹಲಿ — 78-79 ರಲ್ಲಿ ಮುಕ್ತಾಯಗೊಂಡುವ ಪಂಚವಾರ್ಷಿಕ ಯೋಜನೆಯಲ್ಲಿ 27 ಮಿಲಿಯ ಉದ್ಯೋಗಗಳು ಸೃಷ್ಟಿ ಪಲ್ಪಡುವ ನಿರೀಕ್ಷೆ ಇದೆ ಎನ್ನಲಾಗಿದೆ.

★

ಕೇಂದ್ರಕ್ಕೆ ಕೇಳಿಕೆ

ಬೆಂಗಳೂರು — ಪದ್ಯದ ಪರಿಸ್ಥಿತಿಯನ್ನನುಪುಂಸಿ ರಾಜ್ಯವು ಹದಿಮೂರು ಜಿಲ್ಲೆಗಳ ತೀವ್ರ ಅನಾವೃಷ್ಟಿ ಪರಿಹಾರಕ್ಕಾಗಿ ಕೇಂದ್ರವನ್ನು ಎರಡೂವರೆ ಕೋಟಿ ರೂ ಕೇಳಿದೆ.

○

ಪ್ರಧಾನರ ಪ್ರಶಂಸೆ

ಪೋರ್ಟ್‌ಲೂಯಿ — ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಗೌರವಾರ್ಥ ಏರ್ಪಡಿಸಿದ್ದ ಔತಣಕೂಟದಲ್ಲಿ ಅನೇಕ ದೇಶಗಳ ರಾಜಕಾರಣಿಗಳು ಸೇರಿ ಇದ್ದ 350 ಅತಿಥಿಗಳ ಮುಂದೆ ಮಾರಿಷಸ್ ಪ್ರಧಾನಿ ಸರ್ ರಾಮುಲಿಂಗಂರವರು ಪ್ರಧಾನಿ ಇಂದಿರಾರವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು

●

ಚುನಾವಣೆ

ಬೆಳಗಾಂ— ಲೋಕಸಭೆಗೆ ಚುನಾವಣೆ ನಡೆಸುವ ವಿಷಯ ನವೆಂಬರ್‌ನಲ್ಲಿ ನಿರ್ಧರಿಸಲ್ಪಡಬಹುದೆಂದು ಕೇಂದ್ರ ನ್ಯಾಯಾಂಗ ಮಂತ್ರಿ, ಶ್ರೀ ಗೋಖಲೆಯವರು ಪತ್ರಿಕೆಯವರ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೇಳಿದರು.

○

ವಾರ್ಷಿಕ ಸಂಮೇಳನ

ನವ ದೆಹಲಿ — ಸರ್ವ ರಾಜ್ಯಗಳ ಮತ್ತು ಕೇಂದ್ರ ಪ್ರದೇಶದ ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರು ತಮ್ಮ ವಾರ್ಷಿಕ ಸಂಮೇಳನಕ್ಕಾಗಿ ಇಲ್ಲಿ 28 ಮತ್ತು 29 ರಲ್ಲಿ ಸೇರುವರು.

ದಸರಾ ವಸ್ತು ಪ್ರದರ್ಶನ

ದಸರಾ ವಸ್ತು ಪ್ರದರ್ಶನದ ಮಹಿಳಾ ವಿಭಾಗಕ್ಕೆ ಕುಶಲ ಕಲಿಗಳನ್ನು 16 ರ ಸಂಜೆ 5 ಗಂಟೆ ವರೆಗೆ ದಸರಾ ವಸ್ತು ಪ್ರದರ್ಶನದ ಮಹಿಳಾವಿಭಾಗದಲ್ಲಿ ಸ್ವೀಕರಿಸಲಾಗುವುದು.

ನಾಳೆ ಸಂಜೆ 5-30 ಮುಪ್ಪಯ್ಯನವರಿಂದ ಜಾನಪದ ಗೀತೆಗಳು 6 ಎ ವಿ ಉಷ ಠಕ್ಕರ ಹಾಡುಗಾರಿಕೆ 7 ಗಂಟೆ ಗಣಪತಿ ನಾಟಕ ಮಂಡಲಿಯವರಿಂದ ದಾನಶೂರ ಕರ್ಣ ನಾಟಕ

○

ಇಸ್ಲಾಂ ವ್ಯಾಸಂಗಕ್ಕೆ ಕೇಂದ್ರ ಪರ್ಯಾಲೋಚನೆಯಲ್ಲಿ

ಮೈಸೂರು — ಇಸ್ಲಾಂ ವ್ಯಾಸಂಗಕ್ಕಾಗಿ ಒಂದು ಕೇಂದ್ರ ಸ್ಥಾಪಿಸುವ ಯೋಜನೆಯನ್ನು ಮೈಸೂರು ವಿಶ್ವವಿದ್ಯಾನಿಲಯು ಪರ್ಯಾಲೋಚಿಸುತ್ತಿರುವುದಾಗಿ ಉಪಕುಲಪತಿ ಶ್ರೀ ಡಿ. ವಿ ಆರಸ್ ರವರು ಅವರನ್ನು ಅಭಿನಂದಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ಹೇಳಿದರು.

★

ಶ್ರೀ ಬಿ ಎನ್ ಕೆಂಗೇಗೌಡರ ಆಶ್ವಾಸನೆ

ನಗರಾಭಿವೃದ್ಧಿ ಮಂಡಲಿಯ ಅಧ್ಯಕ್ಷರಾದ ಮಾನ್ಯ ಶ್ರೀ ಬಿ ಎನ್ ಕೆಂಗೇಗೌಡರವರು 9 ರಂದು ಮೈಸೂರು ಸರಸ್ವತೀಪುರಂ ವಿಸ್ತರಣೆಯಲ್ಲಿ ಏರ್ಪಡಿಸಿದ್ದ ಪೌರಸಂಸ್ಥೆಯನ್ನು ಉದ್ಘಾಟಿಸುತ್ತಾ, ಸರಸ್ವತೀಪುರಂ ಹೊಸ ವಿಸ್ತರಣೆಗೆ ಅತ್ಯವಶ್ಯಕವಾಗಿ ಬೇಕಾಗಿರುವ ಚರಂಡಿ ಮತ್ತು ರಸ್ತೆಗಳ ಅಭಿವೃದ್ಧಿ ಊರಿನ ಪಶ್ಚಿಮದಲ್ಲಿರುವ ಶ್ಮಶಾನದ ಸ್ಥಳಾಂತರ ಮತ್ತು ಉದ್ಯಾನವನ ಮುಂತಾದ ನಾಗರೀಕ ಸೌಲಭ್ಯಗಳನ್ನು ಬೇಗ ಒದಗಿಸುವುದರ ಜೊತೆಗೆ ಪೌರಸಂಸ್ಥೆಗೆ ಅವಶ್ಯಕವಾದ ಕಮ್ಯೂನಿಟಿ ಹಾಲಿಗೆ ನಿವೇಶನವನ್ನು ಕೊಡುವ ಆಶ್ವಾಸನೆಯನ್ನು ನೀಡಿದರು.

★

ಸೆನೆಟ್‌ಗೆ ವಿದ್ಯಾರ್ಥಿಯ ಆಯ್ಕೆ

ವೆಂಡಟ್ಟೂರ್ — ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಎಂಎಸ್‌ಸಿ ವಿದ್ಯಾರ್ಥಿ ಶ್ರೀ ಎಂ ಬದರಿನಾರಾಯಣರು ವಿಶ್ವವಿದ್ಯಾನಿಲಯ ವಿದ್ಯಾಧಿಕಾರಿಗಳಿಂದ ಸೆನೇಟಿಗೆ ಚುನಾಯಿತರಾದರು.

★

ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗುವರು

ನ್ಯೂಯಾರ್ಕ್ — ಜರಾಲ್ಡ ಫೋರ್ಡರು ಅಧ್ಯಕ್ಷ ಚುನಾವಣೆಯಲ್ಲಿ ಜಿಮ್ಮಿ ಕಾರ್ಟರಿಗೆ ಸೋತರೆ ರಾಜಕೀಯ ವಿಜ್ಞಾನ ಪ್ರೊಫೆಸರ್ ಆಗಬಹುದೆಂದು ಹೇಳಲಾಗಿದೆ.

●

ದಿವ್ಯವಾಣಿ : ಯಾರೂ ತಮ್ಮ ಸೆಂಕೋಲೆಯನ್ನು. ಅದು ಚಿನ್ನದಿಂದ ಮಾಡಿದುದಾದರೂ ಇಚ್ಚಿಸುವುದಿಲ್ಲ ಚಿಂಗ್ ಹೌ.

(2)

ಮುಸ್ಲಿಂ ಜನಾಂಗದವರಿಂದ ಸ್ವಾಗತ

ಮೈಸೂರು — ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ಡಾರು ಲ್ ಉಲ್ಲುನ್ನು ಸಿದ್ದ ಕ್ಷ ಅವರುಗಳ ಕಛೇರಿಗೆ ಭೇಟಿಕೊಟ್ಟಾಗ ಮುಸ್ಲಿಂ ಜನಾಂಗವು ಅದ್ದೂರಿ ಸ್ವಾಗತ ನೀಡಿತು — ಮುಖ್ಯಮಂತ್ರಿಯವರು ಮುಸ್ಲಿಂ ಹಾಡುಗರ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ಕೊಟ್ಟಾಗ ಅವುಗಳ ಅಧ್ಯಕ್ಷರಾದ ಶ್ರೀ ಅಜೀಜ್ ಸೇಠ್ ರವರು ಅಲ್ಲಿಯ ಎಲ್ಲ ವಿಚಾರಗಳನ್ನೂ ವಿವರಿಸಿದರು.

○

ದಿವ್ಯವಾಣಿ

ಅಗ ಬಾ ! ಈಗ ಬಾ ! ಹೋಗಿ ಬಾ ಎನ್ನದಲೆ |
ಅಗಲೇ ಕರೆದು ಕೊಡುವವನ ಧರ್ಮ |
ಹೊನ್ನಾಗದೆ ಬಿಡದು ಸರ್ವಜ್ಞ ||

ಗೋರಕ್ಷಣ'ಕೆ ನಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, " ಗೋರಕ್ಷಣ " ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, ' ಗೋರಕ್ಷಣ " ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ.

" ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

" ಸತ್ಯವಾದಿ " ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ " ಸತ್ಯವಾದಿ "ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ

ಸ್ವರ್ಣಮಹೋತ್ಸವ ಕ್ಷಣದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವವನ್ನು ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI SUDHA

A Superb Tonic

ಭಾರತದಲಿ ಗೋವಧೆ
ನಿಷೇಧವಾಗಲಿ



Protect the Cow

ವುಡ್‌ಲಾಂಡ್ - 8 10 76 ರಿಂದ

ಅಮೋಘ ಆರಂಭ

ಪ್ರೇಮದ ಕಾಣಿಕೆ

ಕನ್ನಡ

ಕಲರ್

ಡಾ. ರಾಜಕುಮಾರ್ ಆರತಿ ಜಯಮಾಲ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 8 10 76 ರಿಂದ

ಉನರ್ಚಿಗಳ್ A

ಕಮಲಾ ಹಾಸನ್ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmaprachara nirata M. S. Krishna Rao (Proprietor) at the Satyavadi Press, Chamarajapuram Mysore 4